**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10015/2019**

**ಚಾಸಾ ಃ36**

**ಪ್ರಾಸಾ ಃ15**

**ಹೆಸರು ಃ ಜಿ.ಸಿದ್ದರಾಜು**
**ತಂದೆಯ ಹೆಸರು ಃ ಗಂಗಯ್ಯ**
**ವಯಸ್ಸು ಃ 60 ವರ್ಷ**
**ವೃತ್ತಿಃ ನಿವೃತ್ತ ಪಿಐ, ರಾಜ್ಯಗುಪ್ತ ಇಲಾಖೆ**
**ವಾಸ ಃ ಬೆಂಗಳೂರು**

**ಈ ದಿನ ದಿನಾಂಕಃ 06.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ದಿನಾಂಕಃ 13.06.2017 ರಿಂದ 26.07.2019 ರವರೆಗೆ ದೊಡ್ಡಬಳ್ಳಾಪುರ ವೃತ್ತನಿರೀಕ್ಷಕರಾಗಿ ಆಗಿ ಕೆಲಸ ನಿರ್ವಹಿಸಿರುತ್ತೇನೆ ಈಗ ನಿವೃತ್ತಿ ಹೊಂದಿರುತ್ತೇನೆ.

2. ದಿನಾಂಕಃ 08.01.2019 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಯ ಸಲುವಾಗಿ ಚಾಸಾ-35 ಪಿಎಸ್ಐ ಬಸವನಗೌಡ ಕೆ. ಪಾಟೀಲ್ ರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿ ಅದೇ ದಿನ ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಮೃತ ಗಂಗಾಧರ ಅವರ ಶವವನ್ನು ಪರೀಶಿಲಿಸಿರುತ್ತೇನೆ. ನಂತರ ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪವನ ಅಲಿಯೂಸ ಬೆಂಕಿ ಇವರ ಹೇಳಿಕೆಯನ್ನು

ಪಡೆಯಲು ವೈದ್ಯರಲಿ ವಿಚಾರಿಸಿದಾಗ ಆತನು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇರುವುದಿಲ್ಲವೆಂದು ವೈದ್ಯರು ಹೇಳಿರುತ್ತಾರೆ.

3. ನಂತರ ಅದೇ ದಿನ ಬೆಳಗ್ಗೆ ಪಿರ್ಯಾದುದಾರರನ್ನು ಕಚೇರಿಗೆ ಬರಮಾಡಿಕೊಂಡು ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಪಿರ್ಯಾದುದಾರರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಪಂಚರಾಗಿ ಚಾಸಾ-3 ಬಾಲಕೃಷ್ಣ ಮತ್ತು ಚಾಸಾ-4 ಸದಾಶಿವ ಇವರನ್ನು ಬರಮಾಡಿಕೊಂಡು ಅವರಿಗೆ ಕೇಸಿನ ವಿಚಾರ ತಿಳಿಸಿ ಅವರು ಸಾಕ್ಷಿದಾರರಾಗಿ ಬರಲು ಒಪ್ಪಿದ ಮೇರೆಗೆ ಅವರ ಸಮಕ್ಷಮದಲ್ಲಿ ಪಿರ್ಯಾದಿಯು ತೋರಿಸಿದ ಕೊರಚನಹಟ್ಟಿಯ ಸಮೀಪದ ಕರೇನಹಳ್ಳಿ ಗ್ರಾಮಕ್ಕೆ ಹೋಗುವ 9 ನೇ ಕ್ರಾಸ್‌ನ 2 ನೇ ಗಲ್ಲಿಯಲ್ಲಿರುವ ಭೂತಪಲ್ಲಿ ಶ್ರೀನಿವಾಸ ಅವರ ಕಟ್ಟಡದ ಮುಂಭಾಗದ ಕಚ್ಚಾರಸ್ತೆಯಲ್ಲಿ ಬೆಳಗ್ಗೆ 09.00 ರಿಂದ 10.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿ ದೊರೆದ ರಕ್ತಮಿಶ್ರಿತ ಮಣ್ಣನ್ನು ಮತ್ತು ಜಲ್ಲಿ ಕಲ್ಲನ್ನು ಮತ್ತು ಮಾದರಿ ಮಣ್ಣನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಡಬ್ಬದಲ್ಲಿ ಸಂಗ್ರಹಿಸಿ ಅಮಾನತ್ತುಪಡಿಸಿಕೊಂಡು ಸ್ಥಳ ಮಹಜರ್ ಮಾಡಿರುತ್ತೇನೆ. ಸದರಿ ಮಹಜರ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

3. ಅಲ್ಲದೇ ಸದರಿ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡ ಜಲ್ಲಿಕಲ್ಲುಮಿಶ್ರಿತ ರಕ್ತದ ಮಣ್ಣನ್ನು ಮತ್ತು ಮಾದರಿ ಮಣ್ಣನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ. 1

ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಅಲ್ಲಿಂದ ನಂತರ ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಬೇಟಿ ನೀಡಿ ಪಂಚರಾದ ಚಾಸಾ-5 ಗೋವಿಂದರಾಜ ಮತ್ತು ಚಾಸಾ-5 ಲೋಕೇಶ ಮತ್ತು ಚಾಸಾ-7 ನರಸಿಂಹಮೂರ್ತಿ ಇವರನ್ನು ಪಂಚರಾಗಿ ಬರಲು ಹೇಳಿ ಅವರಿಗೆ ವಿಷಯ ತಿಳಿಸಿ ಅವರ ಸಮಕ್ಷಮದಲ್ಲಿ ಮೃತ ಗಂಗಾಧರ ಅಲಿಯಾಸ ದಾಸ ಈತನ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಶವಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಅಲ್ಲದೇ ಶವಾಗಾರದಲ್ಲಿ ಮೃತನ ಶವದ ಫೋಟೋಗಳನ್ನು ತೆಗೆ ದಿರುತ್ತೇನೆ. ಸದರಿ 14 ಫೋಟೋಗಳನ್ನು ಇಂದು ನ್ಯಾಯಾಲಯದಲ್ಲಿ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-5 ರಿಂದ 18 ಎಂದು ಗುರುತಿಸಲಾಗಿರುತ್ತದೆ.

4. ಶವವನ್ನು ಪರೀಕ್ಷಿಸಿದಾಗ ಮೃತನ ದೇಹದ ಮೇಲೆ ಒಟ್ಟು 16 ಗಾಯಗಳು ಕಂಡುಬಂದಿದ್ದು ಅದನ್ನು ನಿಪಿ-26 ರ ಶವತನಿಖೆಯ ವರದಿಯಲ್ಲಿ ಕಾಲಂ ನಂಬರ್ 7 ರಲ್ಲಿ ನಮೂದಿಸಿರುತ್ತೇನೆ. ನಂತರ ಶವದ ಮೇಲಿದ್ದ ಬಟ್ಟೆಗಳು ರಕ್ತದ ಕಲೆಯಾದ್ದವು. ಆನಂತರ ತನಿಖಾ ಕಾಲದಲ್ಲಿ ಸ್ಥಳದಲ್ಲಿ ಹಾಜರಿದ್ದ ಮೃತನ ತಂದೆ ಚಾಸಾ-8 ಆರ್. ನಾಗರಾಜು, ಮೃತನ ಅಕ್ಕನ ಗಂಡ ಚಾಸಾ-9 ಪ್ರಸನ್ನ ಕುಮಾರ್ ಹಾಗೂ ಇತರೆ ಸಾಕ್ಷಿದಾರರಾದ ಚಾಸಾ-10 ಶಿವು ಇವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

5. ನಂತರ ಅದೇ ದಿನ ಶವದ ಉಸ್ತುವಾರಿಗೆಂದು ನೇಮಿಸಿದ್ದ ಚಾಸಾ-26 ಪಿಸಿ-1521 ನ್ಯಾಮೇಗೌಡ ಇವರು ಶವದ ಮೇಲಿದ್ದ ಬಟ್ಟೆಗಳನ್ನು ಹಾಗೂ ಮೃತನತಲೆಯಲ್ಲಿ ರಕ್ತದ

ವಾಸನೆ ಬರುತ್ತಿದ್ದ ಖಾರದ ಪುಡಿಯನ್ನು ವೈದ್ಯರು ಸಂಗ್ರಹಿಸಿ ನೀಡಿದ್ದನ್ನು ತಂದು ಕಚೇರಿಯಲ್ಲಿ ಹಾಜರುಪಡಿಸಿದ್ದರ ಮೇರೆಗೆ ಪಂಚರಾದ ಚಾಸಾ-11 ಕೆ.ಪಿ.ಮಂಜುನಾಥ ತಂದೆ ಪಿಳ್ಳಪ್ಪ ಮತ್ತು ಚಾಸಾ-12 ಮಂಜುನಾಥ ತಂದೆ ಮುನಿಯಪ್ಪ ಇವರನ್ನು ಪಂಚರಾಗಿ ಕರೆಸಿ ವಿಚಾರ ತಿಳಿಸಿ ಅವರ ಸಮಕ್ಷಮದಲ್ಲಿ ಮಹಜರ್ ಬರೆದು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು.

6. ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ.3 ರಿಂದ 7 ಎಂದು ಗುರುತಿಸಲಾಗಿರುತ್ತದೆ. ನಿಪಿ-2 ರಲ್ಲಿ ಅಮಾನತ್ತುಪಡಿಸಿಕೊಂಡ ಮು.ಮಾ. 1 ಮತ್ತು 2 ನ್ನು ಮತ್ತು ನಿಪಿ-19 ರಲ್ಲಿ ಅಮಾನತ್ತುಪಡಿಸಿಕೊಂಡ ಮು.ಮಾ.3 ರಿಂದ 7 ವಸ್ತುಗಳನ್ನು ಕ್ರಮವಾಗಿ ಠಾಣಾ ಮಾಲುಪಟ್ಟಿ ಸಂಖ್ಯೆ 3 ಮತ್ತು 4 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ತಂದು ಹಾಜರುಪಡಿಸಿದ್ದ ಚಾಸಾ-25 ಹೆಚ್‌ಸಿ-307 ಸ್ವಾಮಿ ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

7. ನಂತರ ದಿನಾಂಕಃ 09.01.2019 ರಂದು ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಸದರಿ ಕೇಸಿನ ಗಾಯಾಳು ಪವನ ಅಲಿಯಾಸ ಬೆಂಕಿ ಇವನು ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿ ಇರುತ್ತಾನೆಯೇ ಇಲ್ಲವೆ? ಎಂದು ಮನವಿಯನ್ನು ನೀಡಿದ್ದು, ವೈದ್ಯರು ಹೇಳಿಕೆ ನೀಡುವ ಸ್ಥಿತಿಯಲ್ಲಿ ಆತನು ಇರತ್ತಾನೆಂದು ಹೇಳಿದ್ದರಿಂದ ವೈದ್ಯರಾದ ಡಾ॥

ಅರುಣ್‌ಕುಮಾರ್ ಅವರ ಸಮಕ್ಷಮದಲ್ಲಿ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

8. ನಂತರ ಗಾಯಾಳು ತೊಟ್ಟಿದ್ದ ಬಟ್ಟೆಗಳು ರಕ್ತದ ಕಲೆಗಳಾಗಿದ್ದರಿಂದ ಅದನ್ನು ಆತನು ತೆಗೆದು ಇಟ್ಟಿದ್ದನ್ನು ಹಾಜರುಪಡಿಸಿದ್ದರ ಮೇರೆಗೆ ಆಸ್ಪತ್ರೆಗೆ ಪಂಚರಾದ ಚಾಸಾ-13 ನವೀನಕುಮಾರ್ ಮತ್ತು ಚಾಸಾ-14 ಮಂಜುನಾಥ ಇವರನ್ನು ಪಂಚರಾಗಿ ಬರಲು ಹೇಳಿ ಘಟನೆಯ ವಿಷಯವನ್ನು ತಿಳಿಸಿ ಅವರ ಸಮಕ್ಷಮದಲ್ಲಿ ಗಾಯಾಳು ಹಾಜರುಪಡಿಸಿದ ರಕ್ತದ ಕಲೆಯಾಗಿದ್ದ ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಹಾಗೂ ಹಸಿರು ಬಣ್ಣದ ತುಂಬು ತೋಳಿನ ಶರ್ಟ್‌ನ್ನು ಅಮಾನತ್ತುಪಡಿಸಿಕೊಂಡು ಸಂಜೆ 06.00 ಗಂಟೆಯಿಂದ 06.45 ಗಂಟೆಯವರೆಗೆ ಮಹಜರ್ ಜರುಗಿಸಿರುತ್ತೇನೆ. ಸದರಿ ಮಹಜರ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ- 23 (ಸಿ) ಎಂದು ಗುರುತಿಸಲಾಯಿತು.

9. ನಂತರ ಕಚೇರಿಗೆ ವಾಪಸ್ಸು ಬಂದು ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 6/2019 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಅಮಾನತ್ತುಪಸಿಡಿಕೊಂಡ ಬಟ್ಟೆಗಳನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿದ್ದು ಅವುಗಳನ್ನು ಈಗಾಗಲೇ ಮು.ಮಾ. 11 ಮತ್ತು 12 ಎಂದು ಗುರುತಿಸಲಾಗಿರುತ್ತದೆ.

10. ನಂತರ ದಿನಾಂಕಃ 10.01.2019 ರಂದು ಈ ಕೇಸಿನ ಆರೋಪಿಯ ಪತ್ತೆಗಾಗಿ ಪತ್ತೆಗಾಗಿ ಠಾಣಾ ಪಿಎಸ್‌ಐ ಆದ ಚಾಸಾ-35 ಬಸವನಗೌಡ ಕೆ. ಪಾಟೀಲ್ ಹಾಗೂ ಸಿಬ್ಬಂಧಿಗಳನ್ನು ನೇಮಿಸಿದ್ದು, ಅವರು ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಬೆಳಗ್ಗೆ 08.00 ಗಂಟೆಗೆ ಆರೋಪಿಯನ್ನು ನನ್ನ ಕಚೇರಿಯಲ್ಲಿ ಹಾಜರುಪಡಿಸಿ ಈ ಬಗ್ಗೆ ನಿಪಿ-38 ರ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಆರೋಪಿಯನ್ನು ವಿಚಾರಿಸಿ ನಂತರ ದಸ್ತಗಿರಿ ಕ್ರಮ ಜರುಗಿಸಿ ಆತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನನ್ನ ಮುಂದೆ ಹಾಜರುಪಡಿಸಿದ ಮತ್ತು ನಾನು ದಸ್ತಗಿರಿ ಪಡಿಸಿದ ಆರೋಪಿಯನ್ನು ಇಂದು ನ್ಯಾಯಾಲಯದಲ್ಲಿ ನೋಡಿದ್ದಲ್ಲಿ ಗುರುತಿಸುತ್ತೇನೆ. **(ಸದರಿ ಆರೋಪಿಯು ಗೈರು ಹಾಜರಿದ್ದು, ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ಆರೋಪಿ ಪರವಾಗಿ ಶ್ರೀ ಟಿ.ಜಿ.ವಿ. ವಕೀಲರು ತಿಳಿಸಿರುತ್ತಾರೆ.)**

11. ಸದರಿ ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತನ್ನನ್ನು ಕರೆದುಕೊಂಡು ಹೋದರೆ ಹೊಡೆಯಲು ಉಪಯೋಗಿಸಿದ ಮಚ್ಚನ್ನು ಮತ್ತು ಘಟನೆಯ ಸಮಯದಲ್ಲಿ ಆರೋಪಿಯು ಹಾಕಿಕೊಂಡಿದ್ದ ಬಚ್ಚಿಟ್ಟ ಬಟ್ಟೆಗಳನ್ನು ತೋರಿಸುತ್ತೇನೆಂದು ಹೇಳಿರುತ್ತಾನೆ. ಸದರಿ ಹೇಳಿಕೆಯನ್ನು ನಿಪಿ-39 ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯಲ್ಲಿ ನನ್ನ ಮತ್ತು ಆರೋಪಿಯ ಸಹಿಗಳಿರುತ್ತವೆ.

12. ನಂತರ ಕಚೇರಿಗೆ ಪಂಚರಾದ ಚಾಸಾ-15 ಮಹೇಶ್ ಮತ್ತು ಚಾಸಾ-16 ಕೃಷ್ಣಮೂರ್ತಿ ಇವರನ್ನ ಕರೆಸಿ ಕೇಸಿನ ವಿಚಾರವನ್ನ ತಿಳಿಸಿ ಅವರ ಪಂಚರಾಗಿ ಬರಲು ಒಪ್ಪಿಕೊಂಡಿದ್ದರ ಮೇರೆಗೆ ಆರೋಪಿಯು ನೀಡಿದ ಸ್ವ ಇಚ್ಛಾ ಹೇಳಿಕೆಯಂತೆ ಆರೋಪಿಯು ನಮ್ಮನ್ನು ಮತ್ತು

ಪಂಚರನ್ನು ದೊಡ್ಡಬಳ್ಳಾಪುರದ ನಗರದ ಅರ್ಕಾವತಿ ರೈಲ್ವೆ ಬ್ರಿಡ್ಜ್‌ನ ದಕ್ಷಿಣ ದಿಕ್ಕಿನಲ್ಲಿರುವ ಅಮಾನಿಕೆರೆಯಲ್ಲಿ ನೀಲಗಿರಿ ಸಸಿಗಳು ಬೆಳೆದಿರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಆತ ಬಚ್ಚಿಟ್ಟಿದ್ದ ಕೃತ್ಯಕ್ಕೆ ಉಪಯೋಗಿಸಿದ ರಕ್ತದ ಕಲೆಯಾದ ಒಂದು ಕಬ್ಬಿಣದ ಮಚ್ಚನ್ನು ಹಾಗೂ ಕೃತ್ಯದ ಸಮಯದಲ್ಲಿ ತೊಟ್ಟಿದ್ದ ರಕ್ತದ ಕಲೆಯಾದ ಒಂದು ಕಪ್ಪು ಬಣ್ಣದ ತುಂಬು ತೋಳಿನ ಸ್ವೆಟ್ಟರ್‌ನ್ನು ಮತ್ತು ರಕ್ತದ ಕಲೆಯಾದ ಸಿಮೆಂಟ್ ಬಣ್ಣದ ನೈಟ್ ಪ್ಯಾಂಟ್‌ನ್ನು ಮತ್ತು ರಕ್ತದ ಕಲೆಯಾದ ಕಬ್ಬಿಣದ ಕೊಳವೆ ಮಚ್ಚನ್ನು ಹಾಜರುಪಡಿಸಿದ್ದರ ಮೇರೆಗೆ ಪಂಚರ ಸಮಕ್ಷಮದಲ್ಲಿ ಮದ್ಯಾಹ್ಯ 02.00 ರಿಂದ 03.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. **(ಸದರಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ ಪ್ಯಾಕ್ ಮಾಡಿ 'ಎಸ್‌ಬಿ' ಅಕ್ಷರದಿಂದ ಮೋಹರು ಮಾಡಿ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅದರ ಮೇಲೆ ಅಂಟಿಸಿರುತ್ತೇನೆ.)** ಸದರಿ ಮಹಜರ್‌ನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-20(ಬಿ) ಎಂದು ಗುರುತಿಸಲಾಯಿತು.

13. ಅದೇ ರೀತಿ ಸ್ಥಳದಲ್ಲಿ 2 ಫೋಟೋಗಳನ್ನು ತೆಗೆದಿದ್ದು ಅವುಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಪಿ-21 ಮತ್ತು 22 ಎಂದು ಗುರುತಿಸಲಾಗಿರುತ್ತದೆ. ನಂತರ ಕಚೇರಿಗೆ ವಾಪಸ್ಸು ಬಂದು ಅಮಾನತ್ತುಪಡಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 7/2019 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಅಮಾತ್ತುಪಡಿಸಿಕೊಂಡ ವಸ್ತುಗಳನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ. 8 ರಿಂದ 10 ಎಂದು ಗುರುತಿಸಲಾಗಿರುತ್ತದೆ.

14. ನಂತರ ಆರೋಪಿಯನ್ನು ಪತ್ತೆಮಾಡಿಕೊಂಡು ಹಾಜರುಪಡಿಸಿದ ಠಾಣಾ ಸಿಬ್ಬಂಧಿಗಳಾದ ಚಾಸಾ-27 ಪಿಸಿ-1312 ಶಶಿಧರ್ ಮತ್ತು ಚಾಸಾ-28 ಪಿಸಿ-1311 ಅರ್ಜುನ್ ಲಮಾಣಿ ಇವರ ಹೇಳಿಕೆಗಳನ್ನು ದಿನಾಂಕಃ 10.01.2019 ರಂದು ದಾಖಲಿಸಿಕೊಂಡಿರುತ್ತೇನೆ.

15. ನಂತರ ದಿನಾಂಕಃ 11.01.2019 ರಂದ ಈ ಕೇಸಿನ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-2 ಪವನಕುಮಾರ್ ಅಲಿಯಾಸ ಪವನ ಅಲಿಯಾಸ ಬೆಂಕಿ ಇವರ ಹೇಳಿಕೆಯನ್ನು ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ರಡಿ ಪಡೆಯಲು ಮಾನ್ಯ ನ್ಯಾಯಾಲಯಕ್ಕೆ ಮನವಿಯೊಂದಿಗೆ ಚಾಸಾ-30 ಪಿಸಿ-1566 ಶ್ರೀನಿವಾಸ ರವರ ಉಸ್ತುವಾರಿಯಲ್ಲಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-17 ವೆಂಕಟೇಶ್ ಬಾಬು, ಚಾಸಾ-18 ಬಿ.ಆರ್. ಆನಂದ್ ಮತ್ತು ಚಾಸಾ-19 ಎಂ.ಎ. ರಾಜೇಶ್ ಇವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

16. ನಂತರ ದಿನಾಂಕಃ 14.01.2019 ರಂದುಪ್ರತ್ಯಕ್ಷ ಸಾಕ್ಷಿದಾರರಾದ ಪವನಕುಮಾರ್ ಅಲಿಯಾಸ ಪವನ ಅಲಿಯೂಸ ಬೆಂಕಿ ಈತನು ನ್ಯಾಯಾಲಯದಲ್ಲಿ ದಂಡ ಪ್ರಕ್ರಿಯೆ ಸಂಹಿತೆ ಕಲಂ 164 ರಡಿ ನೀಡಿದ ಹೇಳಿಕೆಯನ್ನು ಠಾಣಾ ಸಿಬ್ಬಂಧಿಯು ತಂದು ಹಾಜರುಪಡಿಸಿದ್ದರ ಮೇರೆಗೆ ಅದನ್ನು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ ಸದರಿ ಗಾಯೂಳು ಪವನನ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ನೀಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಅದೇ ರೀತಿ

ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ನೀಡುವಂತೆ ದೊಡ್ಡಬಳ್ಳಾಪುರದ ನಗರದ ಆಯುಕ್ತರಿಗೆ ಮನವಿ ಸಲ್ಲಿಸಿರುತ್ತೇನೆ. ಅದೇ ರೀತಿ ಕೃತ್ಯ ನಡೆದ ದಿನ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ದೊಡ್ಡಬಳ್ಳಾಪುರದ ಬೆಸ್ಕಾಂನ ಅಧಿಕಾರಿಗಳಾದ ಸಹಾಯಕ ಕಾರ್ಯನಿರ್ವಾಹಕ ಅಬಿಯಂತಕರಿಗೆ ಮನವಿ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಚಾಸಾ-1 ರವರನ್ನು ಕಚೇರಿಗೆ ಕರೆಸಿ ಅವರ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

17. ನಂತರ ದಿನಾಂಕಃ 18.01.2019 ರಂದು ಈ ಕೇಸಿನ ಗಾಯಾಳು ಪವನನ ಗಾಯದ ಪ್ರಮಾಣ ಪತ್ರವನ್ನು ಠಾಣಾ ಸಿಬ್ಬಂಧಿ ಚಾಸಾ-29 ಪಿಸಿ-1557 ಕುಮಾರ್ ಇವರು ತಂದು ಹಾಜರುಪಡಿಸಿದ್ದರ ಮೇರೆಗೆ ಅದನ್ನು ಪಡೆದುಕೊಂಡು ಕೇಸಿನ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-34 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರತಿಸಿದ್ದರಿಂದ ಅದನ್ನು ನಿಪಿ-34 (ಬಿ) ಎಂದು ಗುರುತಿಸಲಾಯಿತು.

18. ನಂತರ ದಿನಾಂಕಃ 27.01.2019 ರಂದು ಮೃತನ ಪಿಎಂ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಶವಪರೀಕ್ಷಾ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-27 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-27 (ಬಿ) ಎಂದು ಗುರುತಿಸಲಾಯಿತು.

19. ನಂತರ ದಿನಾಂಕಃ 02.02.2019 ರಂದು ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಕಬ್ಬಿಣದ ಮಚ್ಚನ್ನು ಮನವಿಯೊಂದಿಗೆ ಠಾಣಾ ಸಿಬ್ಬಂಧಿ ಚಾಸಾ-29 ಪಿಸಿ-1527 ಕುಮಾರ್ ಅವರೊಂದಿಗೆ ವೈದ್ಯರಲ್ಲಿಗೆ ಕಳುಹಿಸಿ ಸದರಿ ಮೃತನ ಮೈಮೆಲಿದ್ದ ಗಾಯಗಳು ಸದರಿ ಮಚ್ಚಿನಿಂದ ಹಲ್ಲೆ ಮಾಡಿದ್ದಲ್ಲಿ ಆಗುವ ಸಾಧ್ಯತೆಯಿರುತ್ತದೆಯೇ ಮತ್ತು ಸದರಿ ಗಾಯಗಳಿಂದ ಮೃತನ ಸಾವು ಸಂಭವಿಸುವ ಸಾಧ್ಯತೆಯಿರುತ್ತದೆಯೇ ಎಂದು ಅಭಿಪ್ರಾಯ ವರದಿ ನೀಡುವಂತೆ ಕೋರಿದ್ದು ಅದೇ ದಿನ ವೈದ್ಯರು ಅಭಿಪ್ರಾಯ ವರದಿಯನ್ನು ನೀಡಿರುತ್ತಾರೆ. ಸದರಿ ಮನವಿ ಪತ್ರವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-28 ಎಂದು ಗುರುತಿಸಲಾಗಿರುತ್ತದೆ. ನಿಪಿ-28 ರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-28 (ಬಿ) ಎಂದು ಗುರುತಿಸಲಾಯಿತು. ಅಲ್ಲದೇ ವೈದ್ಯರು ನೀಡಿದ ಅಭಿಪ್ರಾಯ ವರದಿಯನ್ನೂ ಸಹ ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-29 ಎಂದು ಗುರುತಿಸಲಾಗಿರುತ್ತದೆ. ನಿಪಿ-29 ರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-29 (ಬಿ) ಎಂದು ಗುರುತಿಸಲಾಯಿತು.

20. ನಂತರ ದಿನಾಂಕಃ 04.02.2019 ರಂದು ಕೃತ್ಯ ನಡೆದ ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ದೊಡ್ಡಬಳ್ಳಾಪುರದ ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತಕರಿಂದ ವರದಿಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-40 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-40 (ಎ) ಎಂದು ಗುರುತಿಸಲಾಯಿತು.

21. ದಿನಾಂಕಃ 07.02.2019 ರಂದು ಈ ಕೇಸಿನಲ್ಲಿ ಅಮಾನತ್ತುಪಡಿಸಿಕೊಂಡ ಒಟ್ಟು 12 ವಸ್ತುಗಳನ್ನು ಚಾಸಾ-30 ಪಿಸಿ-1566 ಶ್ರೀನಿವಾಸ ಅವರ ಮೂಲಕ ಮೈಸೂರಿನ ಆರ್‌ಎಫ್‌ಎಸ್‌ಎಲ್‌ಗೆ ಕಳುಹಿಸಿಕೊಟ್ಟಿದ್ದು ಅವರು ಹಾಜರುಪಡಿಸಿ ತಂದು ಹಾಜರುಪಡಿಸಿದ್ದ ಸ್ವೀಕೃತಿ ಪ್ರತಿಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಸ್ವೀಕೃತಿ ಪತ್ರವನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-41 ಎಂದು ಗುರುತಿಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-41 (ಎ) ಎಂದು ಗುರುತಿಸಲಾಯಿತು.

22. ನಂತರ ದಿನಾಂಕಃ 14.02.2019 ರಂದು ಕೃತ್ಯ ನಡೆದ ಸ್ಥಳದ ಖಾತಾ ದಾಖಲಾತಿಯನ್ನು ದೊಡ್ಡಬಳ್ಳಾಪುರದ ನಗರಸಭೆಯ ಆಯುಕ್ತರಿಂದ ಪಡೆದುಕೊಂಡು ಅದನ್ನು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿಯವರ ಪತ್ರವನ್ನು ಮತ್ತು ಖಾತಾ ದಾಖಲಾತಿಯನ್ನು ಇಂದು ನ್ಯಾಯಾಲಯದಲ್ಲಿ ಗುರುತಿಸುತ್ತೇನೆ. ಅದನ್ನು ಪತ್ರವನ್ನು ನಿಪಿ-42 ಎಂದು ಗುರುತಿಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-42 (ಎ) ಎಂದು ಗುರುತಿಸಲಾಯಿತು ಮತ್ತು ಖಾತಾ ನಕಲನ್ನು ನಿಪಿ-43 ಎಂದು ಗುರುತಿಸಲಾಯಿತು.

23. ದಿನಾಂಕಃ 14.03.2019 ರಂದು ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆಯನ್ನು ಎಇಇ ಅವರಿಂದ ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಅಭಿಯಂತಕರ ಪತ್ರವನ್ನು ಮತ್ತು ನಕ್ಷೆಯನ್ನು ಕ್ರಮವಾಗಿ ನಿಪಿ-44 ಮತ್ತು 45 ಎಂದು ಗುರತಿಸಲಾಯಿತು. ನಿಪಿ-44 ರಲ್ಲಿರುವ ಸಹಿಯನ್ನು ನಿಪಿ-44 (ಎ) ಎಂದು ಗುರುತಿಸಲಾಯಿತು. ಈವರೆಗಿನ

ತನಿಖೆಯಿಂದ ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

24. ನಂತರ ಡಿವೈಎಸ್‌ಪಿ ಕಚೇರಿಯಿಂದ ನಮ್ಮ ಕಚೇರಿಗೆ ಫ್‌ಎಸ್‌ಎಲ್ ವರದಿಯನ್ನು ಕಳುಹಿಸಿದ್ದು ಅದನ್ನು ಪಡೆದುಕೊಂಡು ದಿನಾಂಕಃ 07.07.2019 ರಂದು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-35 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಟಿ.ಜಿ.ವಿ. ವಕೀಲರಿಂದಃ</u>**

**ಆರೋಪಿತರ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ